ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ:ಇ-ಆಡಳಿತ. ವರ್ಗಾವಣೆ /07/2020-21 ದಿ: 27/08/2021

**-: ಜ್ಞಾಪನ :-**

ವಿಷಯ : ದಿನಾಂಕ:11/11/2020 ರ ಅಧಿಸೂಚನೆಯಂತೆ 2019-20 ನೇ ಸಾಲಿನಲ್ಲಿ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಆನ್ ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳ ಪರಿಶೀಲನೆ ಬಗ್ಗೆ.

ಉಲ್ಲೇಖ:1) ಈ ಕಛೇರಿ ಅಧಿಕೃತ ಜ್ಞಾಪನಾ ಸಮ ಸಂಖ್ಯೆ ದಿನಾಂಕ 11/11/2020 ಮತ್ತು 14/12/2020 ,12 / 01 /2021,17-03-2021

2) ಶಿಕ್ಷಕರ ವರ್ಗಾವಣೆ ಅಧಿಸೂಚನೆ ಸಂಖ್ಯೆ : ಶೀ.ವ.ಕೋ.ಶ.ಸಾ.ವ/01 /2020-21 ದಿನಾಂಕ 29/06/2021 ಮತ್ತು 30/06/2021.

------------

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 2019-20 ನೇ ಸಾಲಿನಲ್ಲಿ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ದಿನಾಂಕ:11/11/2020 ರ ಅಧಿಸೂಚನೆಯಂತೆ ಆನ್ ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳಿಗೆ ಸಂಬಂಧಿಸಿದಂತೆ ಕ್ರಮ ವಹಿಸುವ ಕುರಿತಾಗಿದ್ದು, ಈಗಾಗಲೇ ಪರಿಶೀಲನೆ ಕಾರ್ಯವನ್ನು ಕೈಗೊಂಡಿದ್ದು, ಪ್ರಸ್ತುತ ವಿವಿಧ ಕಾರಣಗಳಿಂದಾಗಿ ಅಂದರೆ ಬಡ್ತಿ, ಪದೋನ್ನತಿ, ಅಕಾಲಿಕ ಮರಣ, ರಾಜೀನಾಮೆ, ನಿವೃತಿ ಇತ್ಯಾದಿ, ಸಕಾರಣಗಳಿಂದ EEDS ತಂತ್ರಾಂಶದಲ್ಲಿ ಮಾರ್ಪಾಡು ಆಗಿರುವ ಕಾರಣ, ಇದೀಗ ಅರ್ಜಿಗಳನ್ನು ಮರುಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇರುತ್ತದೆ.

ವರ್ಗಾವಣಾ ಅರ್ಜಿಗಳ ಕುರಿತು ಪರಿಶೀಲನೆ ನಡೆಸುವಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಆಯಾ ವರ್ಗಾವಣಾ ಪ್ರಾಧಿಕಾರಿಯವರು ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಆನ್ ಲೈನ್ ಮೂಲಕ ಶಿಕ್ಷಕರಿಂದ ಸಲ್ಲಿಕೆಯಾಗಿರುವ ಸ್ವೀಕೃತಿಗಳನ್ನು ಮಾತ್ರ ಪರಿಗಣಿಸದೇ ಆಯಾ ಅಧಿಕಾರಿ/ಶಿಕ್ಷಕರ ಸೇವಾ ವಹಿ ಹಾಗೂ ಇತ್ತೀಚಿನ ಕಾರ್ಯಸ್ಥಿತಿಯನ್ನು ಆಧರಿಸಿ ಅರ್ಜಿಗಳನ್ನು ಪರಿಗಣಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಸದರಿ ಕಾರ್ಯವು ತುರ್ತಾಗಿ ಆಗಬೇಕಾಗಿರುವುದರಿಂದ ಸಂಬಂಧಿಸಿದ ಪ್ರಾಧಿಕಾರಿಗಳು ಸಂಬಂಧಿತ ಶಿಕ್ಷಕರು/ಅಧಿಕಾರಿಯು ದಾಖಲೆಗಳನ್ನು ಖುದ್ದಾಗಿ ಪರಿಶೀಲಿಸಿ ದೃಢೀಕರಿಸಿಕೊಳ್ಳಲು ಸೂಚಿಸಿದೆ.

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ದಿನಾಂಕ:11/11/2020 ರ ಅಧಿಸೂಚನೆಯಂತೆ ಆನ್ ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಅಂತಿಮವಾಗಿ 2020 ರ ಕಾಯ್ದೆ, ನಿಯಮಗಳು ಮತ್ತು ದಿನಾಂಕ: 30/06/2021ರ ಅಧಿಸೂಚನೆಗನುಸಾರವಾಗಿ ಸೇವಾವಹಿಯೊಂದಿಗೆ ತಾಳೆ ಮಾಡಿಕೊಂಡು ಪರಿಶೀಲಿಸಿಕೊಳ್ಳುವುದು. ಸದರಿ ಅರ್ಜಿಗಳ ಪರಿಶೀಲನೆ ಹಾಗೂ ಶಿಕ್ಷಕರು ಬಯಸಿರುವ ವರ್ಗಾವಣೆ ಆದ್ಯತೆಗಳಿಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಆಯಾ ವರ್ಗಾವಣಾ ಪ್ರಾಧಿಕಾರಿಗಳ Login ಗಳಲ್ಲಿ ದಿನಾಂಕ:02/09/2021 ರವರೆಗೆ ಅವಕಾಶ ಕಲ್ಪಿಸಿದೆ. ಈ ಸಂಬಂಧ ಅಗತ್ಯ ಕ್ರಮ ಕೈಗೊಂಡು ಅರ್ಜಿಗಳ ಪರಿಶೀಲನೆ ಕಾರ್ಯವನ್ನು ಪೂರ್ಣಗೊಳಿಸಲು ಸೂಚಿಸಿದೆ. ಸದರಿ ಪ್ರಕ್ರಿಯೆಯಲ್ಲಿ ತಿರಸ್ಕೃತ ಅರ್ಜಿಗಳಿಗೆ ಸಂಬಂಧಿಸಿದಂತೆ ದಿನಾಂಕ: 30/06/2021ರ ಅಧಿಸೂಚನೆಯಂತೆ ಅರ್ಜಿ ಸಲ್ಲಿಸಲು ಅರ್ಹರಿದ್ದಲ್ಲಿ, ದಿನಾಂಕ: 02/09/2021 ರೊಳಗೆ (ಕೊನೆ ದಿನಾಂಕದೊಳಗೆ) ಅರ್ಜಿ ಸಲ್ಲಿಸಲು ಶಿಕ್ಷಕರಿಗೆ ತಿಳಿಸಲು ಕ್ರಮ ಕೈಗೊಳ್ಳುವುದು.

27/8/2021

ನಿರ್ದೇಶಕರು
ಇತರ ಪರೀಕ್ಷೆಗಳು ಹಾಗೂ
ವರ್ಗಾವಣಾ ಪ್ರಕ್ರಿಯೆ ನಿಯಂತ್ರಣಾಧಿಕಾರಿ

ಪ್ರತಿಯನ್ನು:

1) ಅಪರ ಆಯುಕ್ತರು, ಧಾರವಾಡ ಮತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ
2) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ , ಬೆಂಗಳೂರು, ಇವರಿಗೆ ಮಾಹಿತಿಗಾಗಿ
3) ವಿಭಾಗಿಯ ಸಹ ನಿರ್ದೇಶಕರು,ಬೆಂಗಳೂರು, ಮೈಸೂರು,ಬೆಳಗಾವಿ,ಕಲ್ಬುರ್ಗಿ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
4) ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾ. ಶಿ. ಇ. ಇವರಿಗೆ ಸೂಕ್ತ ಕ್ರಮಕ್ಕಾಗಿ
5) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾ. ಶಿ. ಇ. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
6) ಕಛೇರಿ ಪ್ರತಿ.